# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 ENGLISH DAILY Subscription Yearly - Rs. - FRIDAY 31-12-2021



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಚಿಕಾಗೋ ಜೋಳ(ಕಾರ್ನ್) ಫ್ಯೂಚರ್ ದರ ಹೆಚ್ಚಳ

ಚಿಕಾಗೋ ಜೋಳ ಫ್ಯೂಚರ್ ದರ 1 ಬಶೆಲ್‌ಗೆ 6 ಡಾಲರ್ ಸಮೀಪ ಬಂದಿದ್ದು 5 ತಿಂಗಳ ಗರಿಷ್ಠ ಮಟ್ಟಕೇರಿದೆನ್ನಲಾಗಿದೆ. ದಕ್ಷಿಣ ಅಮೆರಿಕಾ ಸೇರಿದಂತೆ ಜೋಳ ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ಪ್ರತಿಕೂಲ ಹವಮಾನದಿಂದ ಉತ್ಪಾದನೆ ಕುಂಠಿತವಾಗುವ ಸಂದೇಹ, ರಸಗೊಬ್ಬರ ದರ ಹೆಚ್ಚಳ ಹಾಗೂ ಜಾಗತಿಕವಾಗಿ ಹಲವು ದೇಶಗಳಲ್ಲಿ ಲಾಕ್‌ಡೌನ್ ನವೀಕರಣ ಇವುಗಳಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಅಲ್ಲದೆ ಜೋಳ ಮೂಲದ ಇಂಧನ ಉತ್ಪಾದನೆಗೆ ಬಳಕೆ, ಚೀನಾ ದೇಶದಿಂದ ಹೆಚ್ಚಿನ ಬೇಡಿಕೆ ಇವುಗಳಿಂದ ಜಾಗತಿಕ ಜೋಳ ದರ ಹೆಚ್ಚಳದಲ್ಲದೆ. ಆದರೂ ಹಿಂದಿನ ಸೀಜನ್‌ಗೆ ಹೋಲಿಸಿದಾಗ ಜೋಳ ದರ ಕುಸಿತ ಕಂಡಿದೆ.

## ಗೋಡಂಬಿ ವ್ಯವಹಾರ ಚೇತರಿಕೆ

ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಗೋಡಂಬಿ ವ್ಯವಹಾರ ಚೇತರಿಕೆ ಕಂಡಿದೆಯೆನ್ನಬಹುದು. ಏಪ್ರಿಲ್‌ನಿಂದೀಚೆ ದೇಶೀ ಹಾಗೂ ಅಂತರಾಷ್ಟ್ರೀಯ ಗೋಡಂಬಿ ವ್ಯವಹಾರ ಚೇತರಿಕೆಕಂಡಿದೆಯೆನ್ನಲಾಗಿದೆ. ಲಾಕ್‌ಡೌನ್ ನಂತರದ ಅವಧಿಯಲ್ಲಿ ಚಟುವಟಿಕೆ ಹೆಚ್ಚಿರುವುದರಿಂದ, ಬೇಡಿಕೆ ಹೆಚ್ಚಳವಾಗಿದೆ. ರಫ್ತು ಕ್ಷೇತ್ರದಲ್ಲಿ ಕಂಟೈನರ್‌ಗಳ ಅಭಾವ, ಫ್ರೈಟ್ ದರ ಹೆಚ್ಚಳ ಇವುಗಳಿಂದ ವ್ಯವಹರಿಸಲು ಹಲವಾರು ಸವಾಲುಗಳಿವೆಯೆನ್ನಲಾಗಿದೆ. ದೇಶೀ ಕಚ್ಚಾ ಗೋಡಂಬಿಯ ಹೊಸ ಸೀಜನ್ ಆರಂಭವಾಗುತ್ತಿದ್ದು ಗೋಡಂಬಿ ಮರಗಳಲ್ಲಿ ಹೂಬಿಡುತ್ತಿರುವ ಸಂದರ್ಭ ಈಗ ದಟ್ಟ ಇಬ್ಬನಿ ಹಾಗೂ ಹಗಲು ರಾತ್ರಿಗಳ ತಾಪಮಾನದಲ್ಲಿ ಅಗಾಧ ವ್ಯತ್ಯಾಸ ಕಂಡುಬರುವುದರಿಂದ ಹೂ ಬಲತು ಕಾಯಾಗಲು ಪ್ರತಿಕೂಲನೆನ್ನಲಾಗಿದೆ. ಹವಾಮಾನ ಪೂರಕವಾದಲ್ಲಿ ಉತ್ತಮ ಬೆಳೆ ನಿರೀಕ್ಷಿಸಬಹುದು. ನವೆಂಬರ್ ಅಂತ್ಯದ ತನಕದ ಮಳೆಯಿಂದ ಹೊಸಬೆಳೆಯ ಸೀಜನ್ ಈಗಾಗಲೇ ವಿಳಂಬವಾಗಿದೆ.